



# ಹೊಂಗೆ ವೈಭವ!

■ ಚಿತ್ರ-ಬರಹ:
ಗಣಂಗೂರು ನಂಜೇಗೌಡ

ಮಾಘ ಮಾಸ ಸರಿದು ಫಾಲ್ಗುಣ ಆರಂಭವಾದರೆ ತರು, ಲತೆಗಳಿಗೆ ವಿಶೇಷ ಕಳೆ ಬರುತ್ತದೆ. ಬಗೆ ಬಗೆಯ ಹೂ ಮುಡಿದ ಮರ, ಗಿಡಗಳು ಸೊಬಗಿನಿಂದ ನಗು ಚೆಲ್ಲುತ್ತವೆ. ಅದರಲ್ಲೂ ಹೊಂಗೆ ಮರ ಮೈ ತುಂಬಾ ಹೂ ಅರಳಿಸಿ ದುಂಬಿಯನ್ನು ಆಕರ್ಷಿಸುವ ಕಾಲವಿದು. ಹಚ್ಚ ಹಸಿರು ಎಲೆಗಳ ನಡುವೆ ಹಾಲು ಬಣ್ಣದ ಹೂ ಗೊಂಚಲು ಗಾಳಿಗೆ ತೊನೆದಾಡುವ ದೃಶ್ಯ ನಯನ ಮನೋಹರ. ಭುವಿಗೆ ಬೆಳಕು ಹರಿಯುತ್ತಿದ್ದಂತೆ ಹೊಂಗೆ ಹೂವಿನ ಮಕರಂದ ಹೀರಲು ಬರುವ ಜೇನು, ದುಂಬಿಗಳ ಝೇಂಕಾರ, ಹೊಂಗೆ ಮರದ ಹಸುರೆಲೆ ನಡುವೆ ಕುಳಿತ ಪಕ್ಷಿಗಳ ಮುಂಜಾನೆಯ ನಿನಾದ ಕಿವಿಗೆ ಇಂಪು ನೀಡುತ್ತದೆ. ಮರದಿಂದ ಉದುರಿದ ಹೂಗಳು ನೆಲದ ಮೇಲೆ ಹೂವಿನ ಹಾಸಿಗೆಯನ್ನೇ

(8ನೇ ಪುಟ ನೋಡಿ)